ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 12/07/2019

# ಅವಿಶ್ವಾಸ ಗೊತ್ತುವಳಿ ಮಂಡಿಸಲು ಸವಾಲು

## ಕಾನೂನಿನ ಬಲೆ ಹೆಣೆಯಲು ಸಂಪುಟ ನಿರ್ಧಾರ: ಕೃಷ್ಣಬೈರೇಗೌಡ

**ಬೆಂಗಳೂರು:** ಕೇಂದ್ರದ ಚಿತಾವಣೆಯಿಂದ ರಾಜ್ಯದ ಮೈತ್ರಿ ಸರಕಾರ ಉರುಳಿಸಲು ಬಿಜೆಪಿ ನಡೆಸುತ್ತಿರುವ ಪ್ರಯತ್ನ ಮೆಟ್ಟನಿಲ್ಲಲು ಸಂಘಟಿತ ಹೋರಾಟ ನಡೆಸಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ''ಸದ್ಯದ ರಾಜಕೀಯ ಸಂದಿಗ್ಧ ರಾಜಕೀಯ ಸನ್ನಿವೇಶದ ಬಗ್ಗೆ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ಮೈತ್ರಿ ಸರಕಾರ ಉರುಳಿಸಲು ಬಿಜೆಪಿ ನಡೆಸುತ್ತಿರುವ 7ನೇ ಪ್ರಯತ್ನ ಇದಾಗಿದ್ದು, ಈ ಪ್ರಯತ್ನದ ಹಿಂದೆ ಕೇಂದ್ರ ಸರಕಾರ ಚಿತಾವಣೆಯೂ ಇದೆ. ಹಿಂದಿಗಿಂತ ಈ ಬಾರಿ ರಾಜಕೀಯ ಬಿಕ್ಕಟ್ಟು ಗಂಭೀರ ಸ್ಥಿತಿ ತಲುಪಿದೆ. ಸಂಘಟಿತ ಪ್ರಯತ್ನದ ಮೂಲಕ ಸರಕಾರ ಉಳಿಸಿಕೊಳ್ಳಲು ಸಂಪುಟ ಒಕ್ಕೊರಲ ನಿರ್ಧಾರ ಕೈಗೊಂಡಿತು'' ಎಂದು ತಿಳಿಸಿದರು.

''ಮೈತ್ರಿ ಸರಕಾರ ಬಹುಮತ ಕಳೆದುಕೊಂಡಿದೆ ಎಂದು ಪ್ರತಿಪಕ್ಷ ಬಿಜೆಪಿ ಭಾವಿಸಿದರೆ ವಿಧಾನಸಭೆಯಲ್ಲಿ ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲಿ. ಅದನ್ನು ಎದುರಿಸಲು ಸರಕಾರ ಸಿದ್ಧವಿದೆ. ಇಲ್ಲವಾದರೆ. ಬಜೆಟ್ ಅನುಮೋದನೆ ಸಂದರ್ಭದಲ್ಲಿ ಮತ ವಿಭಜನೆಗೆ ಬೇಡಿಕೆ ಸಲ್ಲಿಸುವ ಅವಕಾಶವನ್ನು ಬೇಕಾದರೂ ಪ್ರತಿಪಕ್ಷ ಬಳಕೆ ಮಾಡಿಕೊಳ್ಳಲಿ'' ಎಂದು ಸವಾಲು ಹಾಕಿದರು.



**ಸೋಲು ಒಪ್ಪದಿರಲು ನಿರ್ಧಾರ**

ಕೇಂದ್ರದ ಆಡಳಿತಾರೂಢ ಬಿಜೆಪಿ ನಾಯಕರ ಚಿತಾವಣೆಯಿಂದ ಮೈತ್ರಿ ಸರಕಾರವನ್ನು ಉರುಳಿಸುವ ಪ್ರಯತ್ನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಸೋಲೊಪ್ಪದೆ ಕೊನೇ ಕ್ಷಣದವರೆಗೆ ಸರಕಾರ ಉಳಿಸಿಕೊಳ್ಳಲು ಹೋರಾಟ ನಡೆಸಬೇಕು ಎಂದು ಸಂಪುಟದಲ್ಲಿ ನಿರ್ಧರಿಸಲಾಯಿತು. ಸೋಲೊಪ್ಪಿಕೊಂಡು ಅಧಿಕಾರದಿಂದ ನಿರ್ಗಮಿಸಿದರೆ ಪಕ್ಷದ ನೈತಿಕ ಸ್ಥೈರ್ಯ ಕುಸಿಯಲಿದೆ. ಜತೆಗೆ, ಮಧ್ಯಪ್ರದೇಶ ಸೇರಿದಂತೆ ಬೇರೆ ರಾಜ್ಯಗಳಲ್ಲೂ ಬಿಜೆಪಿಯ ಇದೇ ಮಾದರಿ ಕಾರ್ಯಾಚರಣೆ ಮುಂದುವರಿಯಲು ಕುಮ್ಮಕ್ಕು ಸಿಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಸರಕಾರ ಉಳಿಸಿಕೊಳ್ಳಲು ಯಾವುದೇ ಪ್ರಯತ್ನಕ್ಕೂ ಹಿಂದೇಟು ಹಾಕಬಾರದು ಎಂದು ಸಂಪುಟ ಬಯಸಿತು ಎಂದು ಮೂಲಗಳು ತಿಳಿಸಿವೆ.

**ರಾಮಲಿಂಗಾರೆಡ್ಡಿ ಮನಸ್ಸು ಬದಲು?**

ಅತೃಪ್ತ ಶಾಸಕರು ಮನಸ್ಸು ಬದಲಿಸುವ ಸೂಚನೆ ಇದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇವೆಯೇ ಹೊರತು ಕಾಂಗ್ರೆಸ್ ತ್ಯಜಿಸಿಲ್ಲ ಎಂದು ಹೇಳುತ್ತಿರುವುದೇ ಇದಕ್ಕೆ ನಿದರ್ಶನ. ಬಿಜೆಪಿ ತಂತ್ರಗಾರಿಕೆಯನ್ನು ವಿಫಲಗೊಳಿಸಲು ಎಲ್ಲ ಕಾನೂನಾತ್ಮಕ ಹಾಗೂ ತಾಂತ್ರಿಕ ಅಂಶಗಳನ್ನು ಬಳಕೆ ಮಾಡಿಕೊಳ್ಳಲೇಬೇಕು ಎಂದು ಸಚಿವ ಸಂಪುಟ ನಿರ್ಧರಿಸಿತು. ಬುಧವಾರ ರಾಮಲಿಂಗಾರೆಡ್ಡಿ ಅವರನ್ನು ತಾವು ಭೇಟಿ ಮಾಡಿದ ಸಂದರ್ಭದಲ್ಲಿ ನಡೆದ ಮಾತುಕತೆಯ ವಿವರವನ್ನು ಸಿಎಂ ಕುಮಾರಸ್ವಾಮಿ ಅವರು ಈ ಸಂದರ್ಭದಲ್ಲಿ ಸಂಪುಟ ಸಭೆಯ ಗಮನಕ್ಕೆ ತಂದರು.

ರಾಜೀನಾಮೆ ತೀರ್ಮಾನಕ್ಕೆ ಕಾರಣವಾದ ಅನಿವಾರ್ಯತೆಯನ್ನು ರಾಮಲಿಂಗಾರೆಡ್ಡಿ ಅವರು ಹೇಳಿಕೊಂಡಿದ್ದು, ಅನಿವಾರ್ಯ ಸಂದರ್ಭ ಸೃಷ್ಟಿಯಾದರೆ ತಮ್ಮ ಅಧಿಕಾರ ಉಳಿಸಲು ನನ್ನ ನಿರ್ಧಾರ ಬದಲಾಗಬಹುದು ಎಂದು ಭರವಸೆ ನೀಡಿದ್ದಾರೆ ಎಂಬುದನ್ನು ಸಿಎಂ ಸಂಪುಟಕ್ಕೆ ತಿಳಿಸಿದರು ಎಂದು ಉನ್ನತ ಮೂಲಗಳು ಹೇಳಿವೆ.